**ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಾರ್ಕಳ ಇವರ ನ್ಯಾಯಾಲಯದಲ್ಲಿ**

**ದಿನಾಂಕಃ 6 ನೇ ಮಾರ್ಚ್ 2020**

**ಅಪರಾಧಿಕ ಪ್ರಕರಣ ಸಂಖ್ಯೆ ಃ607/2019**

**ರಾಜ್ಯ ಸರ್ಕಾರದ ಪರವಾಗಿ,**

ಪೊಲೀಸ್ ವೃತ್ತ ನೀರಿಕ್ಷಕರು,
ಕಾರ್ಕಳ ವೃತ್ತ,
ಕಾರ್ಕಳ, ಉಡುಪಿ ಜಿಲ್ಲೆ .... ಫಿರ್ಯಾದಿದಾರರು

- ವಿರುದ್ಧ -

ಶಿವಪ್ಪ .... ಆರೋಪಿ

**ದೋಷಾರೋಪಣೆ**

ಶ್ರೀ ಸತೀಶ ಬಿ., ಬಿ.ಎ., ಎಲ್ಎಲ್.ಬಿ., ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆನ್ಯಾಯಿಕ ದಂಡಾಧಿಕಾರಿಯಾದ ನಾನು

ಶಿವಪ್ಪ
ಪ್ರಾಯಃ 28 ವರ್ಷ,
ತಂದೆಃ ಪಕೀರ,
ವಾಸಃ ಒರಿಮಾರು, ಹೊಸ್ಮಾರು ಅಂಚೆ,
ಈದು ಗ್ರಾಮ, ಕಾರ್ಕಳ ತಾಲೂಕು,
ಉಡುಪಿ ಜಿಲ್ಲೆ.

ಈ ಮೇಲ್ಕಂಡ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಿಸುತ್ತೇನೆ.

ದಿನಾಂಕ 26.08.2018 ರಂದು ರಾತ್ರಿ 7.00 ಗಂಟೆ ಸಮಯದಲ್ಲಿ ಆರೋಪಿಯಾದ ನೀವು ಕಾರ್ಕಳ ತಾಲೂಕು ಈದು ಗ್ರಾಮದ ಒರಿಮಾರು ರಿತೇಶ್ ಎಂಬುವವರ ರಿಂಗ್ ಶೆಡ್‌ನ

ಬಳಿ ಹಾದುಹೋಗಿರುವ ರಸ್ತೆಯಲ್ಲಿ ಸಾಕ್ಷಿ-1 ನೇಯವರು ಸಾಕ್ಷಿ-2 ನೇಯವರೊಂದಿಗೆ ನಡೆದುಕೊಂಡು ಹೋಗುತ್ತಿದ್ದಾಗ ಅದೇ ರಸ್ತೆ ಬದಿಯ ಪೊದೆಯಲ್ಲಿ ಅಡಗಿ ಕುಳಿತು ಸಾಕ್ಷಿ-1 ನೇಯವರ ಬಳಿ ಬಂದು ಏಕಾಏಕಿ ಕೈಯಿಂದ ಸಾಕ್ಷಿ-1 ನೇಯವರ ಮುಖಕ್ಕೆ ಹೊಡೆದು "ಶಿವಪ್ಪ ಹೇಳಿದರೆ ಯಾರು ಎಂದು ಗೊತ್ತಾಯಿತಾ" ಎಂದು ಹೇಳಿ ಪುನಃ ಕೈಯಿಂದ ಮುಖಕ್ಕೆ ಹೊಡೆದು ಸಾಕ್ಷಿ-1 ನೇಯವರ ಮೇಲ್ಭಾಗದ ಎರಡು ಹಲ್ಲುಗಳನ್ನು ಉದುರಿಸಿ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ 325 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧವನ್ನು ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಎರಡನೇಯದಾಗಿ, ಈ ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಸಾಕ್ಷಿ-3 ನೇಯವರು "ಯಾಕೆ ಹಲ್ಲೆ ಮಾಡುತ್ತಿದ್ದಿ" ಎಂದು ಕೇಳಿದಾಗ ಸಾಕ್ಷಿ-3 ನೇಯವರಿಗೆ ಕೈ ಯಿಂದ ಹಲ್ಲೆ ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ 323 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧವನ್ನು ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೇಲ್ಕಂಡ ದೋಷಾರೋಪಣೆಗೆ ನೀವು ಈ ನ್ಯಾಯಾಲಯದಿಂದ ಅಧಿವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು<br>ಮತ್ತು ಪ್ರ ದ ನ್ಯಾ ದಂ., ಕಾರ್ಕಳ

**ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಾರ್ಕಳ ಇವರ ನ್ಯಾಯಾಲಯದಲ್ಲಿ**

**ದಿನಾಂಕಃ 6 ನೇ ಮಾರ್ಚ್ 2020**

**ಅಪರಾಧಿಕ ಪ್ರಕರಣ ಸಂಖ್ಯೆ ಃ607/2019**

**ರಾಜ್ಯ ಸರ್ಕಾರದ ಪರವಾಗಿ,**

ಪೊಲೀಸ್ ವೃತ್ತ ನೀರಿಕ್ಷಕರು,
ಕಾರ್ಕಳ ವೃತ್ತ,
ಕಾರ್ಕಳ, ಉಡುಪಿ ಜಿಲ್ಲೆ .... ಫಿರ್ಯಾದಿದಾರರು

**- ವಿರುದ್ಧ -**

ಶಿವಪ್ಪ .... ಆರೋಪಿ

## ಆರೋಪಣೆ

ಪ್ರಶ್ನೆ ಃ ನಿಮಗೆ ಮೇಲೆ ಓದಿ ಹೇಳಿದ ದೋಷಾರೋಪಣೆ ಅರ್ಥವಾಯಿತೆ?

ಉತ್ತರ ಃ

ಪ್ರಶ್ನೆ ಃ ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗ ಬಯಸುವಿರೋ?

ಉತ್ತರ ಃ

(ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ, ವಿವರಿಸಿ ಹೇಳಿದ್ದು ಅವರು ಹೇಳಿದ ಉತ್ತರವನ್ನು ನಾನೇ ಸ್ವತಃ ಯಥಾವತ್ತಾಗಿ ಬರೆದುಕೊಂಡಿರುವುದು ನಿಜವೆಂದು ದೃಢೀಕರಿಸುತ್ತೇನೆ)

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರ ದ ನ್ಯಾ ದಂ., ಕಾರ್ಕಳ